ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು

ಸಿ.ಸಿ. ನಂಃ **475/2024**

| | | |
|---|---|---|
| ಪಿರ್ಯಾದಿ | ಃ | ಶ್ರೀಮತಿ ತಾರಾಮಣಿ<br>ಃಕೋಂಃ ಬಿ.ಎಸ್. ಶಶಿಧರ<br>**39** ವರ್ಷ, ಗಾಣಿಗರ ಬೀದಿ,<br>ಬೇಲೂರು ಟೌನ್,<br>ಬೇಲೂರು ತಾಲ್ಲೂಕು. |
| | | ವಿರುದ್ಧ |
| ಆರೋಪಿ | ಃ | ಶ್ರೀ ಧರಣಿಃ ಉಃ ಧರಣಿಕುಮಾರ್<br>ಃಬಿನ್ಃ ರಾಜಣ್ಣ,<br>**38** ವರ್ಷ, ರೇಣುಕಾ ಥಿಯೇಟರ್ ಹಿಂಭಾಗ,<br>ಆಂಜನೇಯ ದೇವಸ್ಥಾನದ ಬೀದಿ,<br>ಬನಶಂಕರಿ ಎಕ್ಸ್ ಟೆನ್ಷನ್,<br>ಬೇಲೂರು. |

## ಃ ಆರೋಪಣೆಯ ಸಾರಾಂಶ ಃ

ಪಿರ್ಯಾದಿಯು ವ್ಯಾಪರಸ್ಥ ಮಹಿಳೆಯಾಗಿದ್ದು, ಬಟ್ಟೆ ಮತ್ತು ಟೈಲರಿಂಗ್ ಕೆಲಸ ಹಾಗೂ ಬಟ್ಟೆ ವ್ಯಾಪಾರ ಮಾಡುತ್ತಾರೆ. ಆರೋಪಿಯಾದ ನೀನು ಪಿರ್ಯಾದುದಾರರ ಗಂಡನ ಮೂಲಕ ಸುಮಾರು 7-8 ವರ್ಷಗಳಿಂದ ಪರಿಚಯಸ್ಥನಾಗಿದ್ದು, ಆರೋಪಿಯಾದ ನೀನು ಆಗಸ್ಟ್ 2022 ರ ಮೊದಲನೇ ವಾರದಲ್ಲಿ ಪಿರ್ಯಾದುದಾರರ ಬಳಿ ಬಂದು ತನ್ನ ದರದ್ದು ನಿಮಿತ್ತ ಅಂದರೆ ಆರೋಪಿಯಾದ ನಿನ್ನ ಕೈಸಾಲದ ತೀರುವಳಿಗಾಗಿ ಮತ್ತು ವ್ಯಾಪಾರದ ಅಭಿವೃದ್ದಿಗಾಗಿ ರೂ.4,50,000/-ಗಳ ಅವಶ್ಯಕತೆ ಇದೆ ಕೊಡಿ ಎಂದು ಪಿರ್ಯಾದುದಾರರನ್ನು ಕೇಳಿದ್ದು, ಅದರಂತೆ ಪಿರ್ಯಾದಿ ಹಾಗೂ ಆಕೆಯ ಗಂಡ ಆರೋಪಿಯಾದ ನಿನ್ನ ಕೋರಿಕೆಯನ್ನು ಮನ್ನಿಸಿ 20 ದಿವಸಗಳ ಕಾಲವಾಕಾಶ ಕೋರಿದ್ದು, ಅದರಂತೆ ಪಿರ್ಯಾದುದಾರರು ಆರೋಪಿಯಾದ ನಿನಗೆ ದಿನಾಂಕಃ 21.08.2022 ರಂದು ರೂ.4,50,000/- ರೂಗಳ ನಗದು ಹಣವನ್ನು ಪಿರ್ಯಾದುದಾರರು ತನ್ನ ಗಂಡನ ಸಮ್ಮುಖದಲ್ಲಿ ನೀಡಿರುತ್ತಾರೆ. ಆರೋಪಿಯಾದ ನೀನು ಪಿರ್ಯಾದುದಾರಿಂದ ಪಡೆದುಕೊಂಡ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ಅದೇ ದಿನ ಆರೋಪಿಯಾದ ನೀನು ಖಾತೆ

ಹೊಂದಿರುವ ಕೆನರಾ ಬ್ಯಾಂಕ್, ಬೇಲೂರು ಶಾಖೆಯ ಚೆಕ್ ನಂಃ625499ರಲ್ಲಿ ರೂ.4,50,000/– ಗಳನ್ನು ನಮೂದಿಸಿ ಪಿರ್ಯಾದಿಯ ಹೆಸರಿಗೆ ಸಹಿ ಮಾಡಿ ದಿನಾಂಕಃ 21.06.2024 ರಂದು ಅಥವಾ ನಂತರ ಬ್ಯಾಂಕಿಗೆ ಹಾಜರು ಮಾಡಿ ಪಿರ್ಯಾದಿಯು ಹಣ ಪಡೆದುಕೊಳ್ಳುವಂತೆ ಚೆಕ್ ಅನ್ನು ಪಿರ್ಯಾದಿಗೆ ನೀಡಿರುತ್ತೀರಿ. ಅದರಂತೆ ಪಿರ್ಯಾದುದಾರನು ಸದರಿ ಚೆಕ್‌ಅನ್ನು ನಗಧೀಕರಿಸುವ ಉದ್ದೇಶದಿಂದ ದಿನಾಂಕಃ 21.06.2024 ರಂದು ಪಿರ್ಯಾದಿ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಬೇಲೂರು ಶಾಖೆಯ ಮೂಲಕ ಹಾಜರಿಸಲಾಗಿ ಪಿರ್ಯಾದಿ ಬ್ಯಾಂಕಿನವರು ಆರೋಪಿಯಾದ ನಿನ್ನ ಖಾತೆಯನ್ನು ಪರಿಶೀಲಿಸಿದಾಗ, ಆರೋಪಿಯಾದ ನೀನು ಕೊಟ್ಟ ಚೆಕ್ ನಗದಾಗದೇ **"Funds Insufficient"** ಎಂಬ ಹಿಂಬರಹದೊಂದಿಗೆ ಚೆಕ್ ಮತ್ತು ಹಿಂಬರಹವನ್ನು ಪಿರ್ಯಾದಿಗೆ ಬ್ಯಾಂಕಿನವರು ವಾಪಸ್ಸು ನೀಡಿರುತ್ತಾರೆ. ಆನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ 02.07.2024 ರಂದು ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ನೋಟಿಸ್‌ನ್ನು ಆರೋಪಿಯಾದ ನನಗೆ ಜಾರಿ ಮಾಡಿದ್ದು, ಸದರಿ ನೋಟೀಸ್‌ನ್ನು ಆರೋಪಿಯಾದ ನೀನು ದಿನಾಂಕಃ 03.07.2024 ರಂದು ಪಡೆದುಕೊಂಡರೂ ಸಹ ಆರೋಪಿಯಾದ ನೀನು ಇದೂವರೆಗೂ ಯಾವುದೇ ಉತ್ತರವನ್ನಾಗಲೀ, ಹಣವನ್ನಾಗಲೀ ಪಿರ್ಯಾದುದಾರನಿಗೆ ನೀಡಿರುವುದಿಲ್ಲ. ಆರೋಪಿಯಾದ ನೀನು ನಿನ್ನ ಖಾತೆಯಲ್ಲಿ ಚೆಕ್ ಹಣವನ್ನು ಮಾನ್ಯ ಮಾಡುವಷ್ಟು ಹಣವಿಲ್ಲದಿದ್ದರೂ ಪಿರ್ಯಾದಿಗೆ ಚೆಕ್ ಅನ್ನು ನೀಡಿ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಮೋಸ ಮಾಡುವ ಉದ್ದೇಶದಿಂದ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

ಪ್ರಶ್ನೆಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆಪಾಧಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ)

ಸ್ಥಳಃ ಬೇಲೂರು
ದಿನಾಂಕಃ **09.04.2025**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು